**OS No. 194/2021**
**ಡಿ.ಡಬ್ಲ್ಯೂ: 1**

**ದಿನಾಂಕ 19-01-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ವಾದಿಯ ಪರ: ಶ್ರೀ ಎನ್. ಆರ್. ಕೆ ವಕೀಲರಿಂದಃ**

1. ದಾವಾ ಆಸ್ತಿಯ ಸರ್ವೆ ನಂಬರ 22/ಡಿ. ಅದರ ಒಟ್ಟು ಕ್ಷೇತ್ರ 13 ಎಕರೆ 39 ಗುಂಟೆ ಇರುತ್ತದೆ. ದಾವಾ ಆಸ್ತಿಯಲ್ಲಿ 300-350 ಮನೆಗಳು ಇವೆ. ಸದರಿ ಮನೆಗಳ ವಿಸ್ತೀರ್ಣ ಮತ್ತು ಮನೆ ನಂಬರ, ಯಾರ-ಯಾರ ಮನೆ ಎಂದು ನನಗೆ ಹೇಳಲು ಬರುವುದಿಲ್ಲ. ದಾವಾ ಅಸ್ತಿಯಲ್ಲಿ ಸರಕಾರಿ ಆಸ್ಪತ್ರೆ ಇದೆ. ಸದರಿ ಸರಕಾರಿ ಆಸ್ಪತ್ರೆಯ ವಿಸ್ತೀರ್ಣ ನನಗೆ ಗೊತ್ತಿಲ್ಲ.

2. ಅಜಲಾಪೂರ ಗ್ರಾಮದಲ್ಲಿ 350 ಮನೆಗಳು ಇವೆ. ದಾವಾ ಅಸ್ತಿಯನ್ನು ಬಿಟ್ಟು ಬೇರೆ ಗಾವಠಾಣಾ ಇರುವುದಿಲ್ಲ. ದಾವಾ ಆಸ್ತಿಯಲ್ಲಿ ಮನೆಗಳು ಆಗಿ ಸುಮಾರು 50 ವರ್ಷಗಳು ಆಗಿರುತ್ತವೆ. ಸದರಿ ದಾವಾ ಆಸ್ತಿಯಲ್ಲಿ ಮನೆಗಳು ಆಗುವುದಕ್ಕಿಂತ ಮುಂಚೆ ಎಷ್ಟು ಮನೆಗಳು ಇದ್ದವು ಎಂದು ಹೇಳಲು ಬರುವುದಿಲ್ಲ. ಸದರಿ ದಾವಾ ಆಸ್ತಿಯು 1 ಎಕರೆ ವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಯಾವುದೇ ಜಮೀನು ಉಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವಾದಿಯೇ ಕಬ್ಜೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನಿಪಿ-3 ಮತ್ತು ನಿಪಿ-4 ಅಜಲಾಪೂರ ಗ್ರಾಮದ ದಾವಾ ಆಸ್ತಿ ಇರುತ್ತದೆ ಎಂದರೆ ಸಾಕ್ಷಿಯು ಸರಕಾರಿ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ಅಜಲಾಪೂರದಲ್ಲಿ ಗ್ರಾಮದಲ್ಲಿ ಯಾವುದೇ ಸರಕಾರಿ ಭೂಮಿ ಇರುವುದಿಲ್ಲ ದಾವಾ ಅಸ್ತಿಯು ವಾದಿಗೆ ಸಂಬಂಧಿಸಿರುತ್ತದೆ ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯನ್ನು ಲೀಜಿಗಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನಾನು ಯಾವುದೇ ಅಧಿಕಾರ ಇಲ್ಲದೆ ವಾದಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅಸ್ತಿಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರೂ ಕೂಡ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ವಾದಿಯ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.</u>**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ**